# ಸೈಬರ್ ವಂಚನೆ ತಡೆಗೆ ಮುನ್ನೆಚ್ಚರಿಕೆ ಅಗತ್ಯ

## ವಾರಿಯರ್ ಸೀಮಾ ಕಟ್ಟಿಮನಿ ಅಭಿಪ್ರಾಯ



ವಿದ್ಯಾರ್ಥಿಗಳಿಗೆ ಸೈಬರ್ ವಂಚನೆ ತಡೆ ಕುರಿತು ಸೀಮಾ ಕಟ್ಟಿಮನಿ ಅರಿವು ಮೂಡಿಸಿದರು.

**ವಿಕ ಸುದ್ದಿಲೋಕ** ಘಟಪ್ರಭಾ

ಅನಕ್ಷರಸ್ಥರು ಮಾತ್ರವಲ್ಲ ಅಕ್ಷರಸ್ಥರೂ ಸೈಬರ್ ವಂಚನೆಗೆ ಒಳಗಾಗುತ್ತಿರುವುದು ಆತಂಕಕಾರಿ ಎಂದು ಸೈಬರ್ ಸುರಕ್ಷತೆ ವಾರಿಯರ್ ಸೀಮಾ ಕಟ್ಟಿಮನಿ ಹೇಳಿದರು.

ಡಾ|| ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಪುಣೆಯ ಕ್ವಿಕ್ ಹೀಲ್ ಫೌಂಢೇಶನ್ ಹಾಗೂ ನಿಡಸೋಸಿಯ ಎಸ್‌ಜೆಪಿಎನ್ ಬಿಸಿಎ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ಸೈಬರ್ ಸುರಕ್ಷತೆ ಕಾರ್ಯಾಗಾರದಲ್ಲಿ ಮಾತನಾಡಿದರು.

''ಪೊಲೀಸ್ ಇಲಾಖೆ, ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಸೈಬರ್ ವಂಚನೆ ತಡೆಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಆದರೂ ಜನರು ವಂಚನೆಗೆ ಒಳಗಾಗುತ್ತಿದ್ದಾರೆ. ಹಾಗಾಗಿ, ಒಟಿಪಿ, ಹುಸಿ ಲಿಂಕ್‌ಗಳ ಬಗ್ಗೆ ಎಚ್ಚರವಿರಬೇಕು,'' ಎಂದರು.

ಪ್ರಾಚಾರ್ಯ ಮೇಘರಾಜ ಸಂಪಗಾಂವ, ಆರತಿ ಶಮನೇವಾಡಿ, ಅಜಿತ ಹೆಗಡೆ, ಸಾಗರ ವಾಳಕಿ, ಮಾರುತಿ ಪಾಟೀಲ, ಶಶಿಧರ ಕರಾಡೆ, ಪೂರ್ಣಿಮ ಮೆಳವಂಕಿ, ಪ್ರಭಾವತಿ ಪತ್ತಾರ, ಗಾಯತ್ರಿ ಜಗಜಂಪಿ, ಪ್ರಾಚಾರ್ಯ ಬಸವರಾಜ ಹಾಲಬಾವಿ, ಪವನ ಹಿರೇಮಠ, ಆನಂದ ಸೋನಾರ ಇತರರಿದ್ದರು.


ಖಾನಾಪೂರ ತಾಲೂಕಾ ಒಕ್ಕಲುತನ
ಹುಟ್ಟುವಳಿ ಮಾರಾಟ ಸಹಕಾರಿ
ಸಂಘ ನಿಯಮಿತ ನಂದಗಡ
ತಾ:ಖಾನಾಪೂರ ಜಿಲ್ಲಾ:ಬೆಳಗಾವಿ

ತಿದ್ದುಪಡಿ

-09-2025 ರಂದು ಪ್ರಕಟಣೆಯಾದ ನಮ್ಮ
ಘದ ಸಭೆಯ ನೋಟಿಸಿನಲ್ಲಿ ನಜರ ಚೂಕಿನಿಂದ